ಎನ್ನುವರು ಈ ಬಗ್ಗೆ ರಾತ್ರಿ ೧೧-೩೦ ಗಂಟೆ ಸಮಯದಲ್ಲಿ ಫಿರ್ಯಾದಿ ಕೊಟ್ಟಿದ್ದು, ಮ್ಯಾನೇಜಿಂಗ್ ಟ್ರಸ್ಟಿನವರು ಧ್ವನಿವರ್ಧಕ ಯಂತ್ರದ ಮೂಲಕ ಪಾಗೆ ಮಾಡಬಾರದೆಂದು ಭಕ್ತಾದಿಗಳಲ್ಲಿ ವಿನಂತಿಸಿ ಕೊಂಡರು.

ದಿನಾಂಕ ೨೭-೩-೮೮ರಂದು ಬೆಳಿಗ್ಗೆ ಸುಮಾರು ೩ ಗಂಟೆಗೆ, ಜಾತ್ರೆಯಲ್ಲಿ ಪಟಾಕಿ ಸಿಡಿಸಿದ ಸಮಯದಲ್ಲಿ ಯಾರೋ ದುರಾತ್ಮರು ಮೊಹಿದ್ದೀನ್ ಕುನ್ನಿ ಎನ್ನುವರ ಮನೆಯ ಆವರಣದೊಳಗೆ ನುಗ್ಗಿ ಕಿಟಕಿಗಳ ಮತ್ತು ಕಾರಿನ ಗಾಜುಗಳನ್ನು ಒಡೆದು ಹಾಕಿ ಸುಮಾರು ೭೦೦ ರೂಪಾಯಿಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆ. ಈ ಸಂಬಂಧದ ಉಲ್ಲಾಳ ಠಾಣೆಯಲ್ಲಿ ಕೇಸು ದಾಖಲು ಮಾಡಿಕೊಳ್ಳಲಾಗಿದೆ. ಅನಂತರ ಪೋಲೀಸರು ಬಿಡಿ ವ್ಯವಸ್ಥೆ ಮಾಡಿದರು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಎರಡು ಕೋಮಿನ ಮುಖಂಡರುಗಳನ್ನು ಬರಮಾಡಿಕೊಂಡು ಯಾವ ಗಲಭೆಗಳಿಗೂ ಎಡೆಕೊಡದಂತೆ ಎಚ್ಚರಿಕೆ ನೀಡಿದ್ದರಿಂದ ಆ ದಿನ ಯಾವ ಅಹಿತಕರ ಘಟನೆಗಳೂ ಸಂಭವಿಸಲಿಲ್ಲ. ಉಲ್ಲಾಳ ಪಟ್ಟಣದ ಕೆಲವು ಮುತೀಯ ಗೂಂಡಾಗಳನ್ನು ಹಿಡಿದು ವಿಚಾರಿಸಲಾಯಿತು. ಇನ್ನೂ ಯಾವ ಸುಳಿವು ಸಿಕ್ಕಿರುವುದಿಲ್ಲ, ಮೊಹಿದ್ದೀನ್ ಕುನ್ನಿ ಅವರ ಮನೆಯ ಮೇಲೆ ಹಲ್ಲೆ ಮಾಡಿದ ದುರಾತ್ಮರನ್ನು ಹಿಡಿಯುವ ಪ್ರಯತ್ನ ಮುಂದುವರೆದಿದೆ.

ಉಲ್ಲಾಳದಲ್ಲಿ ಆಗಾಗ್ಗೆ ಕೋಮು ಪ್ರಚೋದಿತ ಸಣ್ಣಪುಟ್ಟ ಘಟನೆಗಳು ನಡೆಯುತ್ತಿದ್ದು ಸ್ಥಳೀಯ ಪೋಲೀಸರು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಪರಿಸ್ಥಿತಿ ಹತೋಟಿಯಲ್ಲಿದೆ.

10 ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎ. ನಾಗತಿಹಳ್ಳಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಗಲಭೆಗಳು

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎ. ನಾಗತಿಹಳ್ಳಿ ಗ್ರಾಮದಲ್ಲಿ ನಿರಂತರವಾಗಿ ನಡೆಯುತ್ತಿರುವ ಗಲಭೆಗಳ ಬಗ್ಗೆ.

ಮೇಲ್ಕಂಡ ಎ. ನಾಗತಿಹಳ್ಳಿ ಗ್ರಾಮದಲ್ಲಿ ಮೀನಾಕ್ಷಮ್ಮ ಎಂಬ ವಕ್ಕಲಿಗ ಜನಾಂಗಕ್ಕೆ ಸೇರಿದ ಸುಮಾರು ೩೮ ವರ್ಷದ ವಿಧವೆಗೂ ಅದೇ ಗ್ರಾಮದ ರಾಜೇಗೌಡ ಎಂಬುವವರಿಗೂ ಜಮೀನಿನ ಸಂಬಂಧವಾಗಿ ಈ ಹಿಂದಿನಿಂದಲೂ ವ್ಯಾಜ್ಯ ಇದೆ, ಈ ಜಮೀನು ಮೀನಾಕ್ಷಮ್ಮನವರ ಅಣ್ಣ ಪರಮೇಶ್ವರ್ ಎಂಬ ನಿವೃತ್ತ ಯೋಧರಿಗೆ ನಾಗತಿಹಳ್ಳಿ ಸರ್ವೆ ನಂ. ೬೩ರಲ್ಲಿ ೩ ಎಕರೆಗಾಗಿ ಮಂಜೂರಾತಿಯಾಗಲು ನಡವಳಿಕೆಗಳು ನಡೆಯುತ್ತಿವೆ. ಈ ಸಂಬಂಧವಾಗಿ ಮೀನಾಕ್ಷಮ್ಮ ಜಮೀನಿನ ಸ್ಥಳ ಮಹಜರು ನಡೆಸಲು ತಾಲ್ಲೂಕು ಕಛೇರಿಗೆ ಓಡಾಡಿ ಸ್ಥಳ ಮಹಜರು ನಡೆಸಿದ ಕಾರಣಕ್ಕಾಗಿ ಸದರಿ ರಾಜೇಗೌಡ ಕೆಲವು ಪುಂಡು ಪೋಕರುಗಳನ್ನು ಎತ್ತಿಕಟ್ಟಿ ಮೀನಾಕ್ಷಮ್ಮನವರ ಮಗಳು ಉಮಾವತಿ (ಸುಮಾರು ೧೮ ವರ್ಷ ವಯಸ್ಸು) ಯ ಮೇಲೆ ದಿನಾಂಕ ೮-೧೨-೮೭ರಂದು ಅತ್ಯಾಚಾರ ಮಾಡಲು ಪ್ರಯತ್ನಿಸಿ ಅವರ ಮನೆಯ ಹೆಂಚನ್ನು ಇಳಿಸಿರುತ್ತಾರೆ. ೮-೧೨-೮೭ರಂದು ಉಮಾವತಿಯು ತಂದೆತಾಯಿಗಳು ಮನೆಯಲ್ಲಿರಲಿಲ್ಲ. ಈ ಸಂಬಂಧವಾಗಿ ಪೋಲೀಸ್ ಠಾಣೆಗೆ ದೂರು ನೀಡಲಾಗಿದೆ.

ಈ ದೂರಿನ ಸಂಬಂಧವಾಗಿ ಅದೇ ಗ್ರಾಮದ ನಂಜಪ್ಪಗೌಡ ಗೋವಿಂದೇಗೌಡ ಎಂಬುವವರು ಮೀನಾಕ್ಷಮ್ಮನವರಿಗೆ ಬೆಂಬಲ ನೀಡಿದ ಕಾರಣಕ್ಕಾಗಿ ಮತ್ತು ಮೀನಾಕ್ಷಮ್ಮನವರ ಪರ ಸಾಕ್ಷಿ ಹೇಳಿದ್ದಕ್ಕಾಗಿ ರಾಜೇಗೌಡ ಮತ್ತು ಮಾಯಣ್ಣಗೌಡರಿಬ್ಬರೂ ಸೇರಿ ಕೆಲವು ಪುಂಡು ಪೋಕರುಗಳನ್ನು ಹುರಿದುಂಬಿಸಿ ಮೀನಾಕ್ಷಮ್ಮ ಗೋವಿಂದೇಗೌಡ ಮತ್ತು ನಂಜಪ್ಪಗೌಡರ ಮೇಲೆ ದೌರ್ಜನ್ಯ ನಡೆಸಲು ಪ್ರೇರೇಪಿಸಿದರು. ದಿನಾಂಕ ೧೧-೧೨-೮೭ರಂದು ಮೀನಾಕ್ಷಮ್ಮನವರ ಮನೆಯನ್ನು ಲೂಟಿ ಮಾಡಿ ಸುಮಾರು ೩೦ ಸಾವಿರ ರೂಗಳಷ್ಟು ಪೌಲ್ಯದ ತೆಂಗಿನಕಾಯಿ, ಒಡವೆ ವಸ್ತ್ರ, ಪಾತ್ರೆ ಇತ್ಯಾದಿಗಳನ್ನು ದರೋಡೆ ಮಾಡಿದರು. ಆಗಲೂ ಸಹ ಪೋಲೀಸರಿಗೆ ದೂರು ನೀಡಲಾಗಿದೆ, ಅನಂತರ ಮೀನಾಕ್ಷಮ್ಮನವರ ಸಂಸಾರಕ್ಕೆ ಕೊಲೆ ಬೆದರಿಕೆ ಹಾಕಿ ಅವರನ್ನು ಊರು ಬಿಡಿಸಲಾಯಿತು. ಮಂಡ್ಯ ಜಿಲ್ಲಾ ದಲಿತ ಸಂಘರ್ಷ ಸಮಿತಿಯು ಈ ಕೇಸನ್ನು ಕೈಗೆತ್ತಿಕೊಂಡು ಮೀನಾಕ್ಷಮ್ಮನವರ ಸಂಸಾರ ರಕ್ಷಣೆ ಮತ್ತು ನ್ಯಾಯ ಒದಗಿಸಲು ಮಂಡ್ಯದ ಎಸ್, ಪಿ. ಯವರನ್ನು ಒತ್ತಾಯಿಸಿತು.

ಪೋಲೀಸರಿಂದ ರಕ್ಷಣೆ ಸಿಗದಿದ್ದ ಕಾರಣಕ್ಕಾಗಿ ದಲಿತ ಸಂಘರ್ಷ ಸಮಿತಿಯವರು ಆನಂತರ ಊರಿಗೆ ಮೀನಾಕ್ಷಮ್ಮನವರನ್ನು ಸೇರಿಸಿರುತ್ತಾರೆ.

ಈ ಘಟನೆಗಳಿಗೆ ಬೆಂಬಲಿಸಿದರೆಂಬ ಕಾರಣಕ್ಕಾಗಿ ಗೋವಿಂದೇಗೌಡರ ಮನೆಯನ್ನು ದಿನಾಂಕ ೧೯-೩-೮೮ ರಂದು ಕಲ್ಲಿನಿಂದ ಹೊಡೆದು ಕಿಟಕಿ ಬಾಗಿಲುಗಳನ್ನು ಮುರಿದು ಹಾಕಿ ಇಡೀ ಸಂಸಾರದ ಮೇಲೆ ಹಲ್ಲೆ ನಡೆಸಿರುತ್ತಾರೆ. ಈ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಹೇಳಿಕೆಯನ್ನು ಕೇಳುತ್ತೇನೆ. ಅಷ್ಟಲ್ಲದೆ, ಈ ಬಗ್ಗೆ ಫೋಟೋ ಇದೆ ಅದನ್ನು ಕಳುಹಿಸುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ(ಗೃಹಮಂತ್ರಿಗಳು).–ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಬೆಂಡಿಗನವಿಲೆ ಪೋಲಿಸ್ ಠಾಣೆಯ ಸರಹದ್ದಿನಲ್ಲಿರುವ ಎ. ನಾಗತಿಹಳ್ಳಿಯ ಸರ್ವೆ ನಂ. ೬೩ ರಲ್ಲಿ ೩ ಎಕರೆ ಜಮೀನನ್ನು ಅದೇ ಊರಿನ ಶ್ರೀಮತಿ ಮೀನಾಕ್ಷಮ್ಮನವರ ಅಣ್ಣನಾದ ಶ್ರೀ ಪರಮೇಶ್ವರಪ್ಪ ಎಂಬುವವರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು ತಾ ೧೧-೧೨-೧೯೮೭ ರಂದು ತಕರಾರು ತಕ್ಕೆ ಹಣ ಪಾವತಿ ಮಾಡಿರುತ್ತಾರೆ. ಈ ಜಮೀನು ಆ ಊರಿನ ಸ್ಕೂಲ್ ಮಾಸ್ಟರ್ ರಾಜೇಗೌಡ ಎಂಬುವವರ ಜಮೀನಿನ ಪಕ್ಕದಲ್ಲಿದ್ದು ಈ ವಿಷಯವಾಗಿ ಇಬ್ಬರ ನಡುವೆ ಆಗಾಗ್ಗೆ ತಕರಾರು ಆಗುತ್ತಿತ್ತು.

ತಾ ೨೨-೧೧-೧೯೮೭ ರಂದು ಶ್ರೀಮತಿ ಮೀನಾಕ್ಷಮ್ಮ ಬೆಂಡಿಗನವಿಲೆ ಪೋಲೀಸರಿಗೆ ಫಿರ್ಯಾದಿಯನ್ನು ಕೊಟ್ಟು ದಿನಾಂಕ ೨೧-೧೧ ೧೯೮೭ರ ರಾತ್ರಿ ೧೦ ಗಂಟೆಗೆ ಆಪರಾಧಿಗಳಾದ ರಾಜೇಗೌಡ ಮತ್ತು ಇತರರು ಮನೆಯ ಮೇಲೆ ಕಲ್ಲು ಕೂರಿ ಪೆಂಚ್ ಗಳನ್ನು ಒಡೆದುಹಾಕಿದ್ದಾರೆ ಎಂದು ಆಪಾದಿಸಿದರು. ತಾ ೯-೧೨-೧೯೮೭ರಂದು ಸದರಿ ಮೀನಾಕ್ಷಮ್ಮನವರ ಗಂಡನಾದ ಶ್ರೀ ಬಿ. ಕೆ. ಮದ್ದೇಗೌಡರು ಠಾಣೆಯಲ್ಲಿ ಹಾಜರಾಗಿ ಆ ಹಿಂದಿನ ದಿನ ರಾತ್ರಿ ಅದೇ ಊರಿನವರಾದ ಹೊಯ್ಸಳರಾಜ ಮತ್ತು ಇತರರು ತಮ್ಮ ಮಂಗಳು ಉಮಾದೇವಿ ಆಕೆಯ ಗೆಳತಿ ಲೀಲಾ ಎಂಬುವವರನ್ನು ಚುಡಾಯಿಸಿ ಮಧ್ಯ ರಾತ್ರಿಯಲ್ಲಿ ಬಾಗಿಲು ತಟ್ಟಿ ಕಲ್ಲು ಹೊಡೆದರೆಂದು ಆಪಾದಿಸಿರುತ್ತಾರೆ. ಈ ಎರಡು ಫಿರ್ಯಾದಿಗಳನ್ನೂ ಸ್ಥಳೀಯ ಪೋಲೀಸರು ಎನ್ ಸಿ.ಆರ್. ಎಂದು ನೊಂದಾಯಿಸಿಕೊಂಡಿದ್ದಾರೆ.

ತಾ ೨೨-೧೨-೧೯೮೭ರಂದು ಶ್ರೀಮತಿ ಮೀನಾಕ್ಷಮ್ಮ ಪೋಲೀಸ್ ಠಾಣೆಗೆ ಹಾಜರಾಗಿ ತನ್ನ ಮಂಗಳ ಮೇಲೆ ತಾ ೮-೧೨-೧೯೮೭ರಂದು ನಡೆಯಿತೆನ್ನಲಾದ ಅತ್ಯಾಚಾರದ ವಿಷಯವನ್ನು ಪುನರುಚ್ಚರಿಸಿ ಆಪರಾಧಿಗಳು ತಮ್ಮ ಮನೆಯಲ್ಲಿದ್ದ ಸಾಮಾನುಗಳನ್ನೂ ಕಳವು ಮಾಡಿದ್ದಾರೆಂದು ಆಪಾದಿಸಿದ್ದು ಇದರ ಬಗ್ಗೆ ಪೋಲಿಸರು ಕೇಸು ನೊಂದಾಯಿಸಿಕೊಂಡು ಎಲ್ಲಾ ಆಪರಾಧಿಗಳನ್ನೂ ದಸ್ತಗಿರಿ ಮಾಡಲಾಗಿ ಸದರಿಯವರು ಜಾಮೀನಿನ ಮೇಲೆ ಹೊರಬಂದಿರುತ್ತಾರೆ. ತಾ ೧೨-೧೨-೧೯೮೭ ರಂದು ಉಭಯ ಪಕ್ಷಗಳ ಮೇಲೆ ಜಾಮೀನು ಕೇಸು ದಾಖಲು ಮಾಡಿಕೊಂಡಿದ್ದು ಇದರ ವಿಚಾರಣೆ ನಾಗಮಂಗಲ ತಹಸೀಲ್ದಾರ್‌ರವರ ಮುಂದೆ ಇದೆ.

ಶ್ರೀಮತಿ ಮೀನಾಕ್ಷಮ್ಮನ ಪರವಾಗಿ ನಾಗಮಂಗಲ ದಲಿತ ಸಂಘರ್ಷ ಸಮಿತಿಯವರು ತಾ ೩೧-೧೨-೧೯೮೭ ರಂದು ಬಹಿರಂಗ ಸಭೆ ನಡೆಸಿದರು. ಆದರಲ್ಲಿ ಶ್ರೀಯುತರಾದ ಪಿ. ಲಂಕೇಶ್, ಮೊಲಂಗಿ ರಾಮಮೂರ್ತಿ, ಚಂದ್ರಪ್ರಸಾದ್ ತ್ಯಾಗಿ, ಶ್ರೀಮತಿ ಮೀರಾ ನಾಯಕ್ ಮತ್ತು ಇತರರು ಭಾಗವಹಿಸಿದ್ದರು.

ದಿನಾಂಕ ೧೯-೩-೧೯೮೮ರಂದು ರಾತ್ರಿ ಸದರಿ ಗ್ರಾಮದ ರಾಮಸ್ವಾಮಿ ಮತ್ತು ಇತರ ಜನರು ಮೀನಾಕ್ಷಮ್ಮನ ಮನೆಯ ಮೇಲೆ ಕಲ್ಲು ತೂರಿ ಚುಮ್ಮು ಎಂಬುವರ ಅಂಗಡಿಯನ್ನು ಲೂಟಿ ಮಾಡಿದ ಪ್ರಯುಕ್ತ ಎರಡು ಮೊಕದ್ದಮೆಗಳನ್ನು ನೋಂದಾಯಿಸಿಕೊಂಡು ಆಪರಾಧಿಗಳನ್ನು ದಸ್ತಗಿರಿ ಮಾಡಲಾಗಿ ಪರತ್ತಿನ ಜಾಮೀನಿನ ಮೇಲೆ ಹೊರಬಂದಿರುತ್ತಾರೆ.

ಎ. ನಾಗತಿಹಳ್ಳಿಯ ಮೀನಾಕ್ಷಮ್ಮನ ಮೇಲೆ ನಡೆಯಿತೆನ್ನಲಾದ ಹಲ್ಲೆಗಳ ಬಗ್ಗೆ ಸ್ಥಳೀಯ ಪೋಲೀಸರು ಉದಾಸೀನ ಮನೋಭಾವದಿಂದ ವರ್ತಿಸಿದ್ದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯವರು ನಾಗಮಂಗಲ ಸರ್ಕಲ್ ಇನ್‌ಸ್ಪೆಕ್ಟರ್‌ರವರ ಮೇಲೆ ಲಂಚ ಮತ್ತು ಪಕ್ಷಪಾತ ವರ್ತನೆಯ ಬಗ್ಗೆ ಅರ್ಜಿ ಕೊಟ್ಟಿದ್ದನ್ನು ಶ್ರೀರಂಗಪಟ್ಟಣದ ಡಿ.ಎಸ್.ಪಿ. ಯವರಿಂದ ವಿಚಾರಣೆ ನಡೆಸುತ್ತಿದೆ ಸದರಿ ವಿಚಾರಣೆಯಲ್ಲಿ ಹೊರಬರುವ ಸಾರಾಂಶದನ್ವಯ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.